

ಉತ್ತರಾಖಂಡದ ಜಿಮ್ ಕಾರ್ಬೆಟ್ ಉದ್ಯಾನದಲ್ಲಿ ಕ್ಯಾಮೆರಾಕ್ಕೆ ಸೆರೆಸಿಕ್ಕ ಆನೆಯಮ್ಮ ಹಾಗೂ ಮರಿ

ಇವರ ಪ್ರಮುಖ ಆಸಕ್ತಿ ಹುಲಿ ಮತ್ತು ಚಿರತೆಯ ಚಿತ್ರವನ್ನು ಸೆರೆಹಿಡಿಯುವುದೇ ಆಗಿತ್ತು.

'ಇತ್ತೀಚಿನ ದಿನಗಳಲ್ಲಿ ಕಾಡುಪ್ರಾಣಿಗಳು ಸಫಾರಿ ಗಾಡಿಗೆ ಹೊಂದಿಕೊಂಡು ಬಿಟ್ಟಿವೆ. ಮನುಷ್ಯರು ನಮಗೆ ಏನೂ ತೊಂದರೆ ಮಾಡುವುದಿಲ್ಲ ಅನ್ನುವುದು ಅವಕ್ಕೆ ತಿಳಿದುಬಿಟ್ಟಿದೆ. ವನ್ಯಜೀವಿ ಛಾಯಾಗ್ರಾಹಕನಿಗೆ ಅವುಗಳ ಮೇಲೆ ಪ್ರೀತಿಯಿರಬೇಕು. ವನ್ಯಜೀವಿ ಸಂರಕ್ಷಣೆ ಎನ್ನುವುದನ್ನು ಮುಂದಿಟ್ಟುಕೊಂಡೇ ಕೆಲಸ ಮಾಡಬೇಕು. ಅವುಗಳ ಸೌಂದರ್ಯವನ್ನು ಜನರಿಗೆ ಮನದಟ್ಟು ಮಾಡಬೇಕು. ಕಾಡು ಮತ್ತು ಕಾಡುಪ್ರಾಣಿಗಳನ್ನು ಉಳಿಸುವುದು, ಬೆಳೆಸುವುದು, ಪ್ರೀತಿಸುವುದು – ಇದು ಎಲ್ಲರ ಕರ್ತವ್ಯ ಎನ್ನುವ ಅರಿವನ್ನು ಜನರಲ್ಲಿ ಬಿತ್ತುವುದೇ ವನ್ಯಜೀವಿ ಛಾಯಾಗ್ರಾಹಕನ ಮೊದಲ ಆದ್ಯತೆಯಾಗಿರಬೇಕು. ಭಾವನಾತ್ಮಕ ಸಂಬಂಧ ಗಾಢವಾಗಿರಬೇಕು. ಛಲ ಮತ್ತು ಉತ್ಸಾಹ ಇದ್ದರೆ ಉಳಿದದ್ದು ತಾನೇ ತಾನಾಗಿ ಒದಗಿ ಬರುತ್ತದೆ' ಎನ್ನುವುದು ಮೋಹನ್ ಥಾಮಸ್ ಅವರ ಅಭಿಪ್ರಾಯ.

## ಕನಸುಗಳ ಬೆನ್ನತ್ತಿ ವಿಶ್ವಸಂಚಾರ

ಕರ್ನಾಟಕದ ಬಿಳಿಗಿರಿರಂಗನ ಬೆಟ್ಟ, ಕಬಿನಿ, ಬಂಡೀಪುರ, ನಾಗರಹೊಳೆ, ದಾಂಡೇಲಿ, ಬಾಂಧವಗಡ, ಉತ್ತರಕಾಂಡದ ಜಿಮ್ ಕಾರ್ಬೆಟ್, ಮಸೀನಾ ಗುಡಿ, ಹಿಮಾಲಯ – ಹೀಗೆ ವ್ಯಾಪಕವಾಗಿ ಕಾಡು ಸುತ್ತಿರುವ ಇವರ ಬಳಿ ಅನುಭವದ ಗಣಿಯೇ ಇದೆ. ದೇಶ ಸುತ್ತಿದ



ಮಹಾರಾಷ್ಟ್ರದ ತಡೋಬಾದಲ್ಲಿ ಬಾಯಾರಿಕೆ ತಣಿಸಿಕೊಳ್ಳುತ್ತಿರುವ ಹುಲಿಗಳು